ಗುರುರಾಜ ಬ. ಕನ್ನೂರ, ಧಾರವಾಡ
*ಇಂದಿನ ಹುಡುಗಿಯರ ಕೈಗಳಲ್ಲಿ ಬಳೆಗಳು ಮಾಯವಾಗುತ್ತಿವೆಯಲ್ಲ?*



ಅಹುದು. ಹೆಣ್ಣು ಇಂದು ಅಬಲೆಯಲ್ಲ, ಅಬಳೆ!

ಜೆ.ಶಿವಪ್ರಸಾದ್, ಬೆಂಗಳೂರು
*ರಾಷ್ಟ್ರಪತಿಗಳು ರಬ್ಬರ್ ಸ್ಟಾಂಪ್ ಆದರೆ ಪ್ರಧಾನಿಯವರು ಏನು?*
ಸ್ಟಾಂಪ್ ಪ್ಯಾಡ್!

ಮಾಲತಿರಾಜು, ಬೆಂಗಳೂರು
*ಒಂದು ರಾಜ್ಯದ ಆಡಳಿತದ ಪಾರುಪತ್ಯವನ್ನು ಪೂರ್ತಿ ಮಹಿಳೆಯರೇ ನಿರ್ವಹಿಸಿದರೆ ಏನಾಗುತ್ತೆ?*
ಬ್ಯೂಟಿ ಪಾರ್ಲರ್‌ಗಳಿಗೆ ಶುಕ್ರದೆಸೆ ಒದಗುತ್ತೆ.

ಮಹಾವೀರ ಕಾಸರ, ಚನ್ನಗಿರಿ
*ರಾಗಿಮುದ್ದೆಗೆ ರೋಗವಿಲ್ಲ, ದೇವೇಗೌಡರಿಗೆ?*
ಭೋಗ villa!

ಎಸ್.ಜಿ.ರಾಜಶೇಖರರೆಡ್ಡಿ, ಗೌರಿಬಿದನೂರು
*ಮುಕ್ಕೋಟಿ ದೇವರುಗಳಲ್ಲಿ ಯಾವ ದೇವರನ್ನಾದರೂ ಸರಿಯೇ ತುರ್ತಾಗಿ ಮಾತಾಡಬೇಕಿದೆ; ದೇವರ ಮೊಬೈಲ್ ಅಥವಾ ಲ್ಯಾಂಡ್‌ಲೈನ್ ನಂಬರ್ ಕೊಡುವಿರಾ?*
ಛೆ! ನಿಮ್ಮ ತಾಯಿ–ತಂದೆಯರ ನಂಬರ್ ಸಹ ನಿಮ್ಮ ಬಳಿ ಇಲ್ಲವೇ?

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ
*ತೆರೆಯ ಮೇಲೆ ಆದರ್ಶ ಸತಿಯಾಗಿ ಅಭಿನಯಿಸುವವರು ನಿಜ ಜೀವನದಲ್ಲಿ ಡೈವೋರ್ಸ್ ಕೇಳುವುದೇಕೆ?*
ಮೂರು ಗಂಟೆಯ ಜೀವನ ಸಹ್ಯ, ಮೂರು ಗಂಟಿನ ಜೀವನ ಅ–ಸಹ್ಯವಂತೆ!

ಪಿ.ಎನ್.ಶ್ರೀವತ್ಸ, ಬೆಂಗಳೂರು
*ಇತ್ತೀಚೆಗೆ ಹೆಣ್ಣು ತರುವಾಗ ಒಂದು ಅಂತಸ್ತು ಹೆಚ್ಚಿಗೆ ನೋಡಿ ತರುವುದು ಹೆಚ್ಚಾಗುತ್ತಿರಲು ಕಾರಣ?*
ರಿಸೆಷನ್‌ನಲ್ಲಿ ಪೊಸಿಷನ್ ಕಳೆದುಕೊಂಡರೂ ಮಾವನ ಮನೆಯಲ್ಲಿ ಪೊಸಿಷನ್ ಭದ್ರವಾಗಿರಲೆಂದು!

ಎ.ಎಸ್.ಸ್ವಾಮಿ, ಶೋರಾಪುರ
*ನೀವು ಅದೃಷ್ಟವನ್ನು ನಂಬುತ್ತೀರಾ?*
ಅದೃಷ್ಟವಶಾತ್, ನಂಬುವುದಿಲ್ಲ!

ಬಿ.ವಿ.ನಾರಾಯಣ್, ಬೆಳಗೊಳ
*ಹುಟ್ಟು ನಿಶ್ಚಿತ, ಸಾವು ಖಚಿತ; ಹಾಗಾದರೆ ಬದುಕು?*
ಖಚಿತವಾಗಿಯೂ ಅನಿಶ್ಚಿತ!

ಎಂ.ಎಸ್.ಸೋಮಶೇಖರ್, ಮೈಸೂರು
*ಇರುವ ಒಂದೇ ಜಗತ್ತಿಗೆ ಎಷ್ಟು ಜನ ಜಗದ್ಗುರುಗಳು ಇರುವರು?*
ಅವರು ಜಗದ್ಗುರುಗಳಲ್ಲ, ಜಗ್ಗದ ಗುರುಗಳು; ತಮ್ಮ ಮತ, ಮಠ ಇಷ್ಟೇ ಅವರ ಜಗ, ಅದಕ್ಕೆ ಅವರು ಗುರುಗಳು.

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ನ್ಯಾಯಾಧೀಶರ ಸುತ್ತಿಗೆ ಪೆಟ್ಟು ಬಲವೋ, ಸಹಧರ್ಮಿಣಿಯ ಲಟ್ಟಣಿಗೆ ಹೊಡೆತ ಬಲವೋ ರಾಮ್‌ಜೀ ಸರ್?*



ಸಹಧರ್ಮಿಣೀಯದೇ! ಇದು ನೇರವಾಗಿ ತಲೆಗೇ ತಗುಲುತ್ತದೆ.

ಜೆ.ಸುಬ್ಬನಾಯಕ, ಬೊಮ್ಮಲಾಪುರ
*ಸೊಸೆಯನ್ನು ಬೇಗ ತರಲು ಇಚ್ಛಿಸುವ ಅತ್ತೆಯ ಗುಟ್ಟೇನು?*
ಬೆಕ್ಕಿಗೆ ಇಲಿಯೊಡನೆ ಸರಸವಾಡಲು ಬಲು ಇಷ್ಟ!

ಎಚ್.ಎಸ್.ಶಿವಶಂಕರ್, ಬೆಂಗಳೂರು
*ಬೇರೆ ಊರಿಗೆ ವರ್ಗವಾಗಿದೆ, ಅಲ್ಲಿ ಮೊದಲು ಯಾರನ್ನು ಪರಿಚಯ ಮಾಡಿಕೊಳ್ಳಬೇಕು?*
ಕ್ಷೌರಿಕನನ್ನು! ನಿಮ್ಮ ತಲೆ ಕಾಯುವವನು ಅವನೇ ಅಲ್ಲವೇ...!

ಎಸ್.ಎನ್.ಮಹಾಬಲರಾವ್,ನರಸಿಂಹರಾಜಪುರ
*ವೃಕ್ಷೋ ರಕ್ಷತಿ ರಕ್ಷಿತಃ ಯಾವ ಪುರಾಣದಲ್ಲಿದೆ?*
ನಗರ ಪುರಾಣದ ಚತುರ ಕಾಂಡದಲ್ಲಿದೆ!

ಎಂ.ಎಸ್.ಸುಕನ್ಯಾಬಾಯಿ, ಬಳ್ಳಾರಿ
*ಓಡುವವನು ಎಡವುವ, ಮಲಗಿದವನು?*
ಮುಲುಗುವವ!

## ಬಹುಮಾನಿತ ಪ್ರಶ್ನೆ

ಬೆಳ್ಳಾವೆ ರಮೇಶ್, ಬೆಂಗಳೂರು
*ಅಂತ್ಯಕಾಲದಲ್ಲಿ ಕಾಣಿಸಿಕೊಳ್ಳುವ ಬಂಧುಗಳು ಬೇರೆ ವೇಳೆಯಲ್ಲಿ ಪತ್ತೆ ಇರಲ್ವಲ್ಲಾ?*
ಬೇರೆ ಕಾಲದಲ್ಲೂ ನಿಮ್ಮಲ್ಲಿಗೆ ಬರಲು ಅವರೇನು ವಿಮಾ ಅಥವಾ ಕ್ರೆಡಿಟ್ ಕಾರ್ಡ್ ಏಜೆಂಟರೇ?

ಎಂ.ಎಸ್.ಗುರುರಾಜಾಚಾರು, ಬಳ್ಳಾರಿ
*ಪ್ರಕೃತಿ ಸೌಂದರ್ಯಕ್ಕೂ, ಹೆಣ್ಣಿನ ಸೌಂದರ್ಯಕ್ಕೂ ಏನು ವ್ಯತ್ಯಾಸ?*
ಪ್ರಕೃತಿಯ ಸೊಬಗಿಗೆ ಮೇಕಪ್‌ನ ಅಗತ್ಯವಿಲ್ಲ!

ಜಿ.ಸತ್ಯನಾರಾಯಣಶೆಟ್ಟಿ, ಹೊಸಪೇಟೆ
*ಬೆಕ್ಕು ಅಡ್ಡ ಬಂದರೆ ಅಪಶಕುನ; ನಮ್ಮನ್ನು ಓವರ್‌ಟೇಕ್ ಮಾಡಿದರೆ?*
ಬೆಕ್ಕಿಗೆ ಅಪಶಕುನ!

ಮಹೇಶ್ ಹೆಗ್ಡೆ, ಹೆಗ್ಲೆ
*ಪರಸ್ಪರ ಕಚ್ಚಾಡುವುದು ಅಭಿವೃದ್ಧಿಯ ಮೂಲಮಂತ್ರವಾ?*
ಅಹುದು. ಕಚ್ಚಾಡುವವರ ಲಾಯರ್‌ಗಳ ಅಭಿವೃದ್ಧಿಯ ಮೂಲಮಂತ್ರ!

ಮಲ್ಲನಗೌಡ ಸಿ. ಪಾಟೀಲ, ಬಾಗಲಕೋಟೆ
*ಹುಡುಗಿಯರು ಹೆಚ್ಚಾಗಿ ಜೀನ್ಸ್ ಧರಿಸುವುದರಿಂದ ಷೇರುಪೇಟೆ ಏರಿದ ಹಾಗೆ ಜೀನ್ಸ್ ಬೆಲೆ ಗಗನಕ್ಕೆ ಏರುತ್ತಿದೆಯಲ್ಲಾ ಏಕೆ?*
ಐ ಲವ್ ದಟ್ ಡ್ರೆಸ್ ಎಂದವಳು ಹೇಳಿದ ತಕ್ಷಣ ಗ್ರೇಟ್ ಎನಿಸಿಕೊಳ್ಳಲು ರೇಟ್ ಕೇಳದೆ ಕೊಡಿಸುವ ಬಾಯ್‌ಫ್ರೆಂಡ್ಸೇ ಅದಕ್ಕೆ ಕಾರಣವಂತೆ!

ಬಾ.ರಂ.ಸುರೇಶ್, ಶಿವಮೊಗ್ಗ
*ನನ್ನವಳು ಇತ್ತೀಚೆಗೆ ನನ್ನನ್ನು ಬಹಳವೇ ಪ್ರೀತಿಸುತ್ತಿರುವುದರ ಮರ್ಮ ಏನಿರಬಹುದು?*




ನಿಮಗೆ ಬೋನಸ್ ಬರುವ ಕಾಲ ಹತ್ತಿರ ಬಂದಿರಬಹುದು!

■ ರಾಮ್